(ಇಂದು ದಿನಾಂಕಃ 26-03-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ ಪ್ರತಿವಾದಿ ನಂ. 9 ರಿಂದ 11, 12, 13, 14, 15, 26, 27, 28 ಪರಃ ಶ್ರೀ ಎಸ್.ಆರ್.ಬಿ. ವಕೀಲರಿಂದಃ</u>**

ನಾನು 2010 ರಿಂದ ಮಠದ ಕಮೀಟಿಯ ಸದಸ್ಯನಾಗಿದ್ದೇನೆ. ಮಠ ನಮ್ಮ ಮನೆಗೆ ತಾಗಿಕೊಂಡು ಇದೆ ಎಂದರೆ ಸಾಕ್ಷಿ ಸಮೀಪದಲ್ಲಿ ಇದೆ ಎಂದು ಹೇಳುತ್ತಾರೆ. ನಾನು ಮಠದ ಸಮೀಪದಲ್ಲಿ ವಾಸವಾಗಿದ್ದರಿಂದ ಮಠದ ಇತಿಹಾಸದ ಬಗ್ಗೆ ನನಗೆ ಗೊತ್ತಿದೆ ಎಂದರೆ ಸರಿ. ಶ್ರೀಮತ್ ಪರಮಹಂಸ

ಪದ್ಮನಾಭತೀರ್ಥ ಸ್ವಾಮಿ ಮಹಾರಾಜ್ ತಾಳಿಕೋಟೆ ಇವರ ಮಠದಿಂದ ಬಂದ ಮಠ ಎಂದರೆ ಸರಿಯಲ್ಲ. ಮಹಾರಾಜರು 1897 ರಲ್ಲಿ ಮಠವನ್ನು ಪ್ರಾರಂಭಿಸಿದ್ದಾರೆ. ಅವರೇ ಮುಂಚಿನಿಂದಲೂ ನಡೆಸಿಕೊಂಡು ಬಂದ ಮಠ ಎಂದರೆ ಸರಿ. ಸದರಿಯವರು ಮಠವನ್ನು ಮುಂದುವರಿಸಿಕೊಂಡು ಹೋಗಲು ವ್ಯವಸ್ಥಾಪತ್ರ ಮಾಡಿದ್ದರ ಬಗ್ಗೆ ನನಗೆ ಗೊತ್ತಿದೆ. ವ್ಯವಸ್ಥಾಪತ್ರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ವ್ಯವಸ್ಥಾಪತ್ರದಲ್ಲಿ ಎಷ್ಟು ಜನ ಸದಸ್ಯರು ಮಠವನ್ನು ನಡೆಸಿಕೊಂಡು ಹೋಗಬೇಕು ಎಂದು ಬರೆದಿಲ್ಲ. ವ್ಯವಸ್ಥಾಪತ್ರದಲ್ಲಿ 46 ಸದಸ್ಯರ ಕಮೀಟಿಯನ್ನು ನೇಮಿಸಿದ್ದು 18 ನಿಯಮಗಳನ್ನು ಮಾಡಿದ್ದರು ಎಂದರೆ ಸಾಕ್ಷಿ ಕಮೀಟಿ ಮಾಡಿದ್ದು ಸುಳ್ಳು ಎಂದು ಹೇಳುತ್ತಾರೆ. ದಿನಾಂಕ 26-03-1908 ರಲ್ಲಿ ಮಹಾರಾಜರು ವ್ಯವಸ್ಥಾಪತ್ರವನ್ನು ಬರೆದಿದ್ದಾರೆ ಎಂದರೆ ಸರಿ. ಕಮೀಟಿಯ ಸದಸ್ಯರು ಮತ್ತು ಅನುಯಾಯಿಗಳು ಸದರಿ 18 ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂದರೆ ಸರಿ. ಯಾವುದೇ ಜಾತಿಯ ಅಥವಾ ಧರ್ಮದ ಜನರು ಈ ಮಠದ ಮೇಲೆ ಶ್ರದ್ಧೆ ಇಟ್ಟು ದ್ರವ್ಯ ದ್ವಾರ ಹಾಗೂ ಶರೀರ ದ್ವಾರ ಹೊಂದಿದವರು ಮಠಕ್ಕೆ ಭಜಿಸಲು ಅವಕಾಶ ಕೊಡಬೇಕು ಎಂದು ನಿಯಮದಲ್ಲಿ ಇದೆ ಎಂದರೆ ಸರಿ. ವ್ಯವಸ್ಥಾಪತ್ರದ 3 ನೇ ನಿಯಮ ಒಬ್ಬರನ್ನೊಬ್ಬರ ಮೇಲೆ ವಿಶ್ವಾಸ ಚೆನ್ನಾಗಿ ಇರುವ ಹಾಗೆ ರೀತಿಯಿಂದಲೇ ಎಲ್ಲರೂ ನಡೆದುಕೊಳ್ಳಬೇಕು. ಯಾವನೇ ಒಬ್ಬನು ನಡೆದುಕೊಳ್ಳದಿದ್ದರೆ ಅವನಿಗೆ ಎಲ್ಲರೂ ಕೂಡಿ ಉಪದೇಶ ಇಲ್ಲವೇ ಯೋಗ್ಯ ಇರುವ ಶಾಸನ ಮಾಡಬೇಕು. ಶಾಸನಕ್ಕೆ ಒಪ್ಪಿಗೆ ಕೊಡಲಿಲ್ಲಾದರೆ, ಅವನಿಗೆ ಮಠಕ್ಕೆ ಬರದಂತೆ ಮನಾಯಿ ಆಗಬೇಕು ಎಂದು ಇದೆ ಎಂದರೆ ಸರಿ. ಸದರಿ ವ್ಯವಸ್ಥಾಪತ್ರದ 15 ನೇ ನಿಯಮದ ಪ್ರಕಾರ ಈ ಮಠದಲ್ಲಿ ರಾಜಕೀಯ ಸಂಬಂಧಿ ಸಂಭಾಷಣೆ ಯಾರಿಗೂ ಮಾಡಲು ಕೊಡಬಾರದು ಎಂದು ಇದೆ ಎಂದರೆ ಸರಿ.

ದಿನಾಂಕ 13-11-2020 ರಂದು ನಾನು ಮಠದ ಕಮೀಟಿಯ ಅಧ್ಯಕ್ಷನಾಗಿದ್ದೇನೆ. ಕಮೀಟಿಯ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ಸಾಮಾನ್ಯ ಸಭೆಯ ಮೂಲಕ ಆಯ್ಕೆ ಮಾಡುತ್ತಾರೆ. 46

ಸದಸ್ಯರಲ್ಲಿ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ನೇಮಕ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು 184 ಸದಸ್ಯರು ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ನೇಮಕ ಮಾಡಬೇಕಾಗುತ್ತದೆ ಎಂದು ಹೇಳುತ್ತಾರೆ. ನಾನು ಅಧ್ಯಕ್ಷನಾಗುವ ಮುಂಚೆ ಪ್ರತಿವಾದಿ ನಂ.26 ಅಧ್ಯಕ್ಷರಾಗಿದ್ದರು. 2020 ರಲ್ಲಿ ಪ್ರತಿವಾದಿ ನಂ.26 ಇವರಿಗೆ 75 ವರ್ಷ ಮೇಲ್ಪಟ್ಟು ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನವೆಂಬರ್ 2020 ರಲ್ಲಿ ಕೋವಿಡ್ -19 ಇತ್ತು ಎಂದರೆ ಸರಿ. ಆಗ ಸರಕಾರ ಹಿರಿಯ ನಾಗರಿಕರು ಸಾರ್ವಜನಿಕ ಸ್ಥಳದಲ್ಲಿ ಓಡಾಡಬಾರದು ಮತ್ತು ಸಭೆ ಸಮಾರಂಭಗಳಲ್ಲಿ ಭಾಗವಹಿಸಬಾರದು ಎಂದು ನಿಯಮ ಮಾಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ಮಠದಲ್ಲಿ ಸದರಿ ಪ್ರಕಟಣೆಯನ್ನು ಹಾಕಲಾಗಿತ್ತು ಎಂದರೆ ಸಾಕ್ಷಿ ಅವರೇ ಹಾಕಿದ್ದರು ಎಂದು ಹೇಳುತ್ತಾರೆ. ದಿನಾಂಕ 13-11-2020 ರಂದು ನಡೆದಂತಹ ಸಾಮಾನ್ಯ ಸಭೆಯಲ್ಲಿ 96 ಸದಸ್ಯರು ಭಾಗವಹಿಸಿದ್ದರು. 96 ಜನ ಭಾಗವಹಿಸಿದ್ದರು ಎಂದು ತೋರಿಸಲು ದಾಖಲಾತಿ ಮಠದಲ್ಲಿ ಇದೆ. 2019 ರಲ್ಲಿ ನಾನು ಉಪಾಧ್ಯಕ್ಷನಾಗಿದ್ದೆ. ಆ ಸಮಯದಲ್ಲಿ 26 ನೇ ಪ್ರತಿವಾದಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. 2019 ರಲ್ಲಿ 26 ನೇ ಪ್ರತಿವಾದಿ ಅಧ್ಯಕ್ಷರಾಗಿ ನಾನು ಉಪಾಧ್ಯಕ್ಷನಾಗಿ ಆಯ್ಕೆಯಾದ ಸಮಯದಲ್ಲಿ ಎಷ್ಟು ಜನ ಸದಸ್ಯರು ಸಾಮಾನ್ಯ ಸಭೆಯಲ್ಲಿ ಹಾಜರಿದ್ದರು ಎಂದು ನೆನಪಿಲ್ಲ. ವ್ಯವಸ್ಥಾಪತ್ರದ ಪ್ರಕಾರ ಇದ್ದಂತಹ ಸದಸ್ಯರ ಬಹುಮತದ ಒಪ್ಪಿಗೆಯ ಮೇರೆಗೆ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ನೇಮಕ ಮಾಡಲಾಗಿತ್ತು ಎಂದರೆ ಸರಿ. 2019 ರ ಪೂರ್ವದಲ್ಲಿ 1 ನೇ ಪ್ರತಿವಾದಿ ಅಧ್ಯಕ್ಷರಾಗಿದ್ದರು. 1 ನೇ ಪ್ರತಿವಾದಿ 1986 ರಲ್ಲಿ ಪ್ರಥಮವಾಗಿ ಮಠದ ಕಮೀಟಿಯ ಅಧ್ಯಕ್ಷರಾಗಿದ್ದರು. ಸದರಿಯವರು 1986 ರಿಂದ 2019 ರ ವರೆಗೆ ಕಮೀಟಿಯ ಅಧ್ಯಕ್ಷರಾಗಿ ಮುಂದುವರಿದಿದ್ದರು ಎಂದರೆ ಸರಿಯಲ್ಲ. 2010 ರಲ್ಲಿ ಲಕ್ಷ್ಮಣ ಚೂಡಾ ನಾಯ್ಕ ಎನ್ನುವವರು ಅಧ್ಯಕ್ಷರಾಗಿದ್ದರು. ಹಿಂದೆ ಇದ್ದಂತಹ ಅಧ್ಯಕ್ಷರು ಮತ್ತು ಕಮೀಟಿಯ ಪದಾಧಿಕಾರಿಗಳು ಹೊಸದಾಗಿ ನೇಮಕಗೊಂಡಂತಹ ಅಧ್ಯಕ್ಷರು ಮತ್ತು ಕಮೀಟಿಯ ಪದಾಧಿಕಾರಿಗಳಿಗೆ ಎಲ್ಲಾ ಚರ ಮತ್ತು ಸ್ಥಿರ ಆಸ್ತಿಗಳ

ದಾಖಲಾತಿಗಳ ಪಟ್ಟಿಯನ್ನು ಮತ್ತು ದಾಖಲಾತಿಗಳನ್ನು ಹಸ್ತಾಂತರ ಮಾಡಬೇಕಾಗುತ್ತದೆ ಎಂದರೆ ಸರಿ. ಆಯ್ಕೆಯಾದ ಪದಾಧಿಕಾರಿಗಳ ಆಡಳಿತಾವಧಿ ಇಂತಿಷ್ಟು ವರ್ಷ ಎಂದು ನಿಗದಿಪಡಿಸಿಲ್ಲ ಎಂದರೆ ಸರಿ. 2019 ರ ಪೂರ್ದಲ್ಲಿ ಇದ್ದಂತಹ ಆಯ್ಕೆಯಾದ ಪದಾಧಿಕಾರಿಗಳು ನಂತರ ಬಂದಂತಹ ಪದಾಧಿಕಾರಿಗಳಿಗೆ ಸ್ಥಿರ ಮತ್ತು ಚರ ಆಸ್ತಿಗಳ ದಾಖಲಾತಿಗಳ ಪಟ್ಟಿ ಮತ್ತು ದಾಖಲಾತಿಗಳನ್ನು ಹಸ್ತಾಂತರ ಮಾಡಿದ್ದಾರೆ ಎಂದರೆ ಸರಿಯಲ್ಲ. 2019 ರಲ್ಲಿ 26 ನೇ ಪ್ರತಿವಾದಿ ಅಧ್ಯಕ್ಷರಾದಾಗ ಹಿಂದೆ ಇದ್ದಂತಹ ಪದಾಧಿಕಾರಿಗಳು ಸ್ಥಿರ ಮತ್ತು ಚರ ಆಸ್ತಿಗಳ ದಾಖಲಾತಿಗಳ ಪಟ್ಟಿ ಮತ್ತು ದಾಖಲಾತಿಗಳನ್ನು ಹಸ್ತಾಂತರ ಮಾಡಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳ ಪಟ್ಟಿ ಮತ್ತು ದಾಖಲಾತಿಗಳನ್ನು ಹಸ್ತಾಂತರ ಮಾಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 13-11-2020 ರಂದು ನಾನು ಅಧ್ಯಕ್ಷನಾಗಿ ಆಯ್ಕೆಯಾದಾಗ ಸೂಚಕರಾಗಿ ಮಂಜುನಾಥ ರೇವಣಕರ ಮಾಡಿದ್ದಾರೆ. ಅನುಮೋದಕರಾಗಿ ಯಾರು ಮಾಡಿದ್ದಾರೆ ಎಂದು ನೆನಪಿಲ್ಲ. ಆ ದಿನ ಮುಂಜಾನೆ 9.00 ಗಂಟೆಗೆ ಪ್ರಾರಂಭವಾಗಿ 2.00 ಗಂಟೆಯವರೆಗೆ ಸಭೆ ನಡೆದಿದೆ. ಆ ಸಭೆಯಲ್ಲಿ 26 ನೇ ಪ್ರತಿವಾದಿ ಹಾಜರಿದ್ದರು. ಆ ಸಮಯದಲ್ಲಿ ಕೋವಿಡ್-19 ರ ನಿಯಮಗಳು ಜಾರಿ ಇದ್ದುದರಿಂದ 26 ನೇ ಪ್ರತಿವಾದಿ ಸಭೆಯಲ್ಲಿ ಭಾಗವಹಿಸಿರಲಿಲ್ಲ ಅನ್ನುವುದು ಸರಿಯಲ್ಲ. ಸದರಿ ಸಭೆ ವ್ಯವಸ್ಥಾಪತ್ರ ಮತ್ತು ನಿಯಮದ ಪ್ರಕಾರ ನಡೆದಿರಲಿಲ್ಲ ಅನ್ನುವುದು ಸರಿಯಲ್ಲ. ಸದರಿ ಸಭೆಯಲ್ಲಿ ಸಭಾಧ್ಯಕ್ಷರನ್ನಾಗಿ ಯಾರನ್ನೂ ಮಾಡಿರಲಿಲ್ಲ. ಆ ದಿನ ಯಾವುದೇ ಸಭೆ ನಡೆದಿಲ್ಲ, ಯಾರೂ ಸಭೆಯಲ್ಲಿ ಸೂಚನೆ ಮಾಡಿಲ್ಲ ಮತ್ತು ಯಾರೂ ಅನುಮೋದನೆ ಮಾಡಿಲ್ಲ ಅನ್ನುವುದು ಸರಿಯಲ್ಲ. ದಿನಾಂಕ 17-11-2020 ರಂದು ಸಭೆಗೆ 26 ನೇ ಪ್ರತಿವಾದಿಯನ್ನು ಒತ್ತಾಯಪೂರ್ವಕವಾಗಿ ಮಠಕೆ ಕರೆಯಿಂದ ಬೆಳಿಗ್ಗೆ 9.00 ರಿಂದ ಸಾಯಂಕಾಲ 5.20 ರ ವರೆಗೆ ಮಠದಲ್ಲಿ ಅವರನ್ನು ಒತ್ತಾಯಪೂರ್ವಕವಾಗಿ ಅವರನ್ನು ಇರಿಸಿಕೊಂಡು ಮಠದ ಬೀಗದ ಕೈ, ಆಸ್ತಿಗಳ ದಾಖಲಾತಿಗಳು ಮತ್ತು ಚರ ಮತ್ತು ಸ್ಥಿರ

ಆಸ್ತಿಗಳ ದಾಖಲಾತಿಗಳ ಪಟ್ಟಿ ಮತ್ತು ದಾಖಲಾತಿಗಳನ್ನು ನಾನು ಅಧ್ಯಕ್ಷನಾಗಿದ್ದರಿಂದ ನನಗೆ ಒಪ್ಪಿಸಬೇಕು ಎಂದು ಬೇರೆ ವಾದಿಗಳು ಮತ್ತು ಬೇರೆ ಜನರನ್ನು ಸೇರಿಸಿಕೊಂಡು ಗಲಾಟೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಇದರಿಂದ ಬೇಸತ್ತು 26 ನೇ ಪ್ರತಿವಾದಿ ಮಠಕ್ಕೆ ಸಂಬಂಧಪಟ್ಟ ಬೀಗದ ಕೈ, ರಜಿಸ್ಟರಗಳು, ಠರಾವು ಪುಸ್ತಕ ಮತ್ತು ಮಹಾರಾಜರ ಮೂರ್ತಿಗಳನ್ನು ಕೊಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಬೀಗದ ಕೈ, ರಜಿಸ್ಟರ ಮತ್ತು ಠರಾವುಗಳನ್ನು ಒತ್ತಾಯಪೂರ್ವಕವಾಗಿ ತೆಗೆದುಕೊಂಡಿದ್ದೇನೆ ಅನ್ನುವುದು ಸರಿಯಲ್ಲ. ಈ ಘಟನೆಯ ಬಗ್ಗೆ ಠರಾವು ಪುಸ್ತಕದಲ್ಲಿ ನಮೂದಿಸಿದ್ದು ಸದರಿ ದಾಖಲಾತಿ ನನ್ನ ಬಳಿ ಇದೆ ಎಂದರೆ ಸರಿಯಲ್ಲ.

ನಮ್ಮ ಮಠಕ್ಕೆ ಶೇಷಾ ಶಂಕರ ಜೋಶಿ ಪುರೋಹಿತರಾಗಿದ್ದಾರೆ ಎಂದರೆ ಸರಿ. ಸದರಿಯವರಿಗೆ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ನಿತ್ಯಪೂಜೆಗೆ ಬೇಕಾಗುವ ಆಭರಣಗಳನ್ನು ಕೊಡದೇ ಮತ್ತು ಸದರಿಯವರಿಗೆ ಸರಿಯಾದ ರೀತಿಯಲ್ಲಿ ಪೂಜೆ ಮಾಡಲೂ ಸಹ ಕೊಡದೇ ಇದ್ದುದರಿಂದ ಸದರಿಯವರು 6 ತಿಂಗಳು ಮೌನವಾಗಿ ಖಿನ್ನತೆಗೆ ಒಳಗಾಗಿದ್ದರು ಎಂದರೆ ಸರಿಯಲ್ಲ. ಅದೇ ಕಾರಣದಿಂದ ಸದರಿಯವರು ಮೃತಪಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 56 ರಿಂದ 66 ರವರೆಗಿನ ಬ್ಯಾಂಕ್‌ಗಳಿಗೆ ನಾನು ಅಧ್ಯಕ್ಷನಾಗಿದ್ದೇನೆ ಎಂದು ಪತ್ರ ಬರೆದಿದ್ದೇನೆ. ಅದರ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ. ನಾನು ಅಧ್ಯಕ್ಷನಾಗಿದ್ದೆ ಎಂದು ಪ್ರತಿವಾದಿ ನಂ. 56 ರಿಂದ 66 ಇವರಿಗೆ ಪತ್ರ ಬರೆದಿಲ್ಲ ಅನ್ನುವುದು ಸರಿಯಲ್ಲ. ನಾನು ಅಧ್ಯಕ್ಷನಾಗದೇ ಇದ್ದುದರಿಂದ ನಾನು ಹಾಕಿದಂತಹ ಈ ದಾವೆ ಊರ್ಜಿತವಾಗುವುದಿಲ್ಲ ಅನ್ನುವುದು ಸರಿಯಲ್ಲ. ನಾನು ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಲ್ಲ ಅನ್ನುವುದು ಸರಿಯಲ್ಲ.

ಸರಕಾರದ ಮುಜರಾಯಿ ಇಲಾಖೆಯಿಂದ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ದೇವಸ್ಥಾನದ ಆಡಳಿತದ ಬಗ್ಗೆ ದಾಖಲೆಗಳನ್ನು ಒದಗಿಸಲು ಪತ್ರ ಬರೆದಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಟ್ರಸ್ಟ್ ಡೀಡ್‌ನ್ನು

ನಾನು ಓದಿ ತಿಳಿದುಕೊಂಡಿದ್ದೇನೆ. ದಾವಾ ಪ್ರಾರ್ಥನೆಯ 'ಬಿ' ಕಾಲಂನಲ್ಲಿ ನಮೂದಿಸಿದಂತೆ ಮಠದ ಆಡಳಿತದ ಪರವಾಗಿ ನೋಂದಾಯಿತವಾದ ಟ್ರಸ್ಟ್ ಡೀಡ್ ಕಾನೂನಾತ್ಮಕವಾಗಿದ್ದು ಅದೇ ಪ್ರಕಾರ ನಡೆಯುತ್ತಿದ್ದು ನಾನು ಕೇಳಿರುವ ಪ್ರಾರ್ಥನೆ ಅಂದರೆ ಅಸಿಂಧು ಎಂದು ಘೋಷಣೆ ಮಾಡಲು ಅವಕಾಶ ಇಲ್ಲ ಅನ್ನುವುದು ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರಗಳನ್ನು ಪಡೆಯಲು ನಾನು ಅರ್ಹನಲ್ಲ ಅನ್ನುವುದು ಸರಿಯಲ್ಲ. ದಾವಾ ಸ್ವತ್ತುಗಳು ಮಠಕ್ಕೆ ಸಂಬಂಧಿಸಿದ್ದು ಅವುಗಳಲ್ಲಿ ಯಾರಿಗೂ ವೈಯಕ್ತಿಕವಾಗಿ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿ. ಮಠದ ಸ್ವತ್ತುಗಳು ಅಧ್ಯಕ್ಷರಿಗೆ ಸಂಬಂಧಪಟ್ಟಿದ್ದು ಅವರೇ ನಡೆಸಿಕೊಂಡು ಹೋಗಬೇಕು ಮತ್ತು ಅದು ಒಬ್ಬರೇ ವ್ಯಕ್ತಿಗೆ ಸಂಬಂಧಪಟ್ಟಿದ್ದು ಎಂದು ವ್ಯವಸ್ಥಾಪತ್ರದಲ್ಲಿ ಇಲ್ಲ ಎಂದರೆ ಸರಿ.

**ಪಾಟೀ ಸವಾಲುಃ ಪ್ರತಿವಾದಿ ನಂ. 62 ಮತ್ತು 63 ರವರ ಪರ ವಕೀಲರಿಂದಃ**

ಪ್ರತಿವಾದಿ ನಂ. 62 ಮತ್ತು 63 ಇವರು ಈ ದಾವೆಗೆ ಅವಶ್ಯಕ ಪಕ್ಷಗಾರರು ಅಲ್ಲ ಅನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ. 18, 19 ಮತ್ತು 21 ರವರ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

**ಪಾಟೀ ಸವಾಲುಃ ಪ್ರತಿವಾದಿ ನಂ. 38, 59, 61 ಮತ್ತು 63 ರವರ ಪರ ಶ್ರೀ ಜಿ.ಎಫ್.ಎನ್. ವಕೀಲರಿಂದಃ**

ಹೊಸ ಕಮೀಟಿ ಯಾವಾಗ ಆಗಿದೆ ಎಂದರೆ ಸಾಕ್ಷಿ ನಿಯಮದ ಪ್ರಕಾರ ಆಗಿಲ್ಲ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಬ್ಯಾಂಕಿನಲ್ಲಿ ಇಟ್ಟಂತಹ ಠೇವಣಿಗೆ ಸಂಬಂಧಪಟ್ಟಂತೆ ಹೊಸ ಕಮೀಟಿಯವರಿಗೆ ಖಾತೆಗಳನ್ನು ಮತ್ತು ಠೇವಣಿಗಳ ಬಗ್ಗೆ ವ್ಯವಹಾರ ಮಾಡಲು ತಾತ್ಕಾಲಿಕ ನಿರ್ಬಂಧಕಾಜ್ಞೆ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ಅರ್ಜಿ ಹಾಕಿದ್ದೆವು, ಆದರೆ ನ್ಯಾಯಾಲಯ ಕೊಟ್ಟಿಲ್ಲ ಎಂದು ಹೇಳುತ್ತಾರೆ. ತಾತ್ಕಾಲಿಕ ನಿರ್ಬಂಧಕಾಜ್ಞೆ ಇದ್ದರೆ ಮಾತ್ರ ಬ್ಯಾಂಕಿನವರು ವ್ಯವಹಾರ ಮಾಡಲು

ಅವಕಾಶ ಕೊಡುವುದಿಲ್ಲ ಎಂದರೆ ಸಾಕ್ಷಿ ನನ್ನಿಂದ ನಿರಪೇಕ್ಷಣಾ ಪತ್ರ ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ. ಹೊಸ ಕಮೀಟಿಯವರು ಬ್ಯಾಂಕಿಗೆ ಹೋಗಿ ವ್ಯವಹಾರ ಮಾಡಿದಾಗ ಅದು ಅಧೀಕೃತವಾಗಿರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ. 7, 52, 53, 68, 74 ಮತ್ತು 75 ರವರ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

**ಪಾಟೀ ಸವಾಲುಃ ಪ್ರತಿವಾದಿ ನಂ. 73,76 ಮತ್ತು 77 ರವರ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

**ಪಾಟೀ ಸವಾಲುಃ ಪ್ರತಿವಾದಿ ನಂ. 29 ರಿಂದ 31 ರವರ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

**ಪಾಟೀ ಸವಾಲುಃ ಪ್ರತಿವಾದಿ ನಂ. 35 ರಿಂದ 37 ರವರ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ